ಮುಖ ದಪ್ಪಗೆ ಮಾಡ್ಕಂಡು ಕೂತ. ಅವನನ್ನ ಅವನ ಪಾಡಿಗೆ ಬಿಟ್ಟು, ಭಗವಂತ ಜಂಬಂಣನ ಕಡೆ ತಿರುಗಿದ.

'ನೋಡಪಾ ಜಂಬಣ್ಣ.'

'ಜಂಬಂಣ.'

'ಯೇನು ಹಂಗಂದ್ರೆ?'

'ನನ್ನ ಹೆಸರು ಜಂಬಂಣ.'

'ನಾನಂದಿದ್ದೂ ಅದೇ ಅಲ್ಲೇನಪಾ?'

'ನೀನು ಹೇಳಿದ್ದು ಜಂಬಣ್ಣ.'

'ಸರಿ. ನೀನು ಹೇಳಿದಂಗೇ ಆಗಲಿ ತಗ. ಯೀಗ ವಂದು ಕೆಲಸ ಮಾಡಣ. ಯಮಧರ್ಮ ತಪ್ಪು ಮಾಡಿದ. ಅದು ನಿನ್ನ ಪಾಲಿನ ಅದೃಷ್ಟ. ನರಕದಿಂದ ತಪ್ಪುಸ್ಗಂಡು ಮತ್ತೆ ನರಕಕ್ಕೇ ಬಂದ ಅನ್ನಂಗಾಡಬೇಡ. ಈಗ ನಿಂಗೆ ಸ್ವರ್ಗ ಸಿಗಂಗಿಲ್ಲ. ಸಿಗಾ ಅಂಥಾದ್ದೇನಾರಾ ಮಾಡಬೇಕು ನೀನು. ನಿನ್ನ ಭೂಲೋಕಕ್ಕೆ ಮತ್ತೆ ಕಳುಸ್ತೀನಿ. ಹೋಗೀಗ. ಸ್ವರ್ಗ ಸಿಗೋ ಅಂಥಾದ್ದೇನಾರಾ ಮಾಡು. ಮತ್ತೆ ಬಾ. ವಂದಿಷ್ಟು ವಳ್ಳೇ ಕೆಲಸ ಮಾಡು. ಹೋಗು.'

* * *

ಮಾರನೇ ದಿಸ ಯವತ್ತಿನಂಗೆ ಜಂಬಂಣ ಹೆಂಡತಿ ಮಗ್ಗಲಾಗಿಂದ ಎದ್ನೋ, ಇಷ್ಟತ್ತನಕ ನಡೆದಿದ್ದೆಲ್ಲಾ ಕನಸೇ ಯಿದ್ದಿರಬೇಕು ಅನ್ನಂಗಾಗಿತ್ತು. ಇವತ್ತಿನ ತನ ಏನಾಗಿತ್ತೋ ಅದನ್ನ ಯೋಚನೆ ಮಾಡಕೆ ಟೈಮಿಲ್ಲ. ಸೊರ್ಗಕ್ಕೆ ಯಂಟ್ರ ತಗಳಾ ಅಂಥದ್ದೇನಾರಾ ಮಾಡಬೇಕು. ಭಗವಂತನೇ ಹೇಳಿದಾನೆ ಅಂದ ಮೇಲೆ ಮುಗೀತಲ್ಲ.

ತನ್ನ ಎಂಟಡಿ–ಹತ್ತಡಿ ಅಂಗಡಿ ಉರುಫ್ ಆಫೀಸಿಗೆ ಕಾಲಿಟ್ಟಾಗಲೂ ಅದೇ ಚಿಂತೇಲಿದ್ದ. ಅವನ ಆಫೀಸಿನ ಏಕೈಕ ಕಾರಕೂನ ಸಣ್ಣಮಲ್ಲಪ್ಪ ಆಗಲೇ ಬಂದು ಕುಂತಿದ್ದ. ಮಕಾ ಮೈಯೆಲ್ಲಾ ಇಂಕೋ ಇಂಕು. ಟೇಬಲ್ ಮೇಲೆ ಒಂದು ಮಸೀ ದೌತೀನೂ ಅವನ ಪೆನ್ನಿನ ನಿಬ್ಬೂ ಇದ್ವು. ಕೈನಗೆ ಪೆನ್ನಿನ ಬುಡ ಹಿಡ್ಕಂಡು ಒಂದು ಯಿಂಕ್‌ಪಿಲ್ಲರ್‌ನಿಂದ ಯಿಂಕ್ ಹಾಕ್ಕಂತಿದ್ದ. ಈಗೊಂದು ಇಪ್ಪತ್ತು ವರ್ಷದಿಂದ ತನತ್ರ ಕೆಲಸ್ಸಕಿದಾನೆ. ಅವನನ್ನ ನೋಡ್ತಿದ್ದಂಗೇ ಜಂಬಂಣ ಹೇಳಿದ, 'ಮಲ್ಲಪ್ಪಾಲೇ, ಯಿವತ್ತಿಂದ ನಿಂಗೆ ನೂರು ರೂಪಾಯಿ ಸಂಬ್ಳ ಜಾಸ್ತಿ ಮಾಡೀನಿ ಹೋಗು.' ಧಣಿಗೆ ಯದ್ದು ನಮಸ್ಕಾರ ಮಾಡಾ ಗಡಿಬಿಡಿನಗೆ ಯಿಂಕ್ ಪಿಲ್ಲರ್ ಕೈಯಿಂದ ಜಾರಿ ಅಂಗೀಗೂ ಯಿಂಕ್ ಮೆತ್ಗಂತು. ಅವನ ಥ್ಯಾಂಕ್ಸ್ ಕೇಳಕೆ ಜಂಬಂಣ ಇರಲಿಲ್ಲ. ಕಣ್ಣೀರು ತುಂಬಿಕೊಂಡ ಸಣ್ಮಲ್ಲಪ್ಪ ಧಣಿ ಬೆನ್ನಿಗೆ ವಂದು ನಮಸ್ಕಾರ ಹಾಕಿದ.

ನೂರು ರೂಪಾಯಿ ಹೆಚ್ಗೆ ಮಾಡಿದ್ದಕ್ಕೆ ಜಂಬಂಣನ ಎದೆ ಏನೂ ತೇವ ಆಗಲಿಲ್ಲ. ಮಾತಿಲ್ಲದಂಗೇ ಟೇಬಲ್ ಮೇಲೆ ಕೂತು ಡ್ರಾಯರ್‌ನಿಂದ ಒಂದು ಸಣ್ಣ ನೋಟ್ ಪುಸ್ತಕ, ಮಕ್ಳು ಸ್ಕೂಲಿಗೆ ಒಯ್ತಾರಲ್ಲ ಅಂಥಾದ್ದು, ತೆಗೆದ. ಮೊದಲನೇ ಪುಟದಲ್ಲಿ ತನ್ನ ಮನೆ ದೇವರ ಹೆಸರು ಬರೆದ. ಪುಟ ತಿರುವಿದ. ಮುಂದಿನ ಪುಟದ ನಡೂಬರಕೆ ಒಂದು ಉದ್ದುದ್ದ ಗೆರೆ ಹಾಕಿ ಪುಟಾನ್ನ ಎರಡು ಭಾಗ ಮಾಡಿದ. ಎಡಗಡೆಗೆ ಭಾಗಕ್ಕೆ ರೈಟ್ ಮಾರ್ಕ್ ಹಾಕಿದ, ಇದು ವಳ್ಳೇ ಕೆಲಸಕ್ಕೆ, ಬಲಗಡೆ ಭಾಗಕ್ಕೆ ಯಿಂಟು ಮಾರ್ಕ್ ಹಾಕಿದ, ಇದು ಕೆಟ್ಟ ಕೆಲಸಕ್ಕೆ. ಯಿವತ್ತಿಂದ ತಾನು ವಳ್ಳೇದು ಮಾಡ್ಲಿ, ಕೆಟ್ಟದ್ದು ಮಾಡ್ಲಿ, ಯಲ್ಲಾ ಬರೆದಿಡಬೇಕೂ ಅಂತ ನಿರ್ಧಾರ ಮಾಡಿದ. ಭಗವಂತ ಪಟ್ಟಿ ಕೇಳ್ದಾಗ ಮರೆತು ಯಡವಟ್ಟು ಆಗಬಾರದಲ್ಲಾ? ಬೆಳಿಗ್ಗೆ ಎದ್ದಾಗಿಂದ ಇಲ್ಲೀ ತನಕ ತಾನು ಏನೇನು ಮಾಡಿದೆ ಅಂತ ಯೋಚನೆ ಮಾಡಿದ. ಕೆಟ್ಟದ್ದು ಮಾಡಿದ್ದೇನೂ ನೆನಪಿಗೆ ಬರಲಿಲ್ಲ. ಎಡಗಡೆ ಭಾಗದಲ್ಲಿ 'ಸಣ್ಮಲ್ಲಪ್ಪ ಕೇಳದಿದ್ರೂ, ನಾನೇ ನಾನಾಗಿ ಅವನ ಸಂಬ್ಳಾನ ನೂರು ರೂಪಾಯಿ ಜಾಸ್ತಿ ಮಾಡಿದೆ' ಅಂತ ಬರ್ಕಂಡ.

ಹನ್ನೆರಡು ಗಂಟೆಗೆ ಅವನ ಖಾಸಾ ದೋಸ್ತ್ ಬಂಡೀ ಸಿದ್ದಪ್ಪ ಬಂದ. ಅವನೂ ಇವನಂಗೇ ಲೇವಾದೇವಿ ಅಂಗಡಿ ಇಟ್ಗಂಡಿದನೆ. ಆದರೆ ಜಂಬಂಣನಷ್ಟು ಉದ್ಧಾರ ಆಗಿಲ್ಲ. ಅದು ಹೆಂಗೆ ಮಾಡದು, ಇದು ಹೆಂಗೆ ಮಾಡದು ಅಂತ ಕೇಳಕೆ ಜಂಬಂಣನ್ನ ಹುಡುಕ್ಕಂಡು ಬರ್ತಿರ್ತನೆ. ಅವತ್ತೂ ಬರ್ತಿದ್ದಂಗೇ ಜೇಬ್ನಾಗಿಂದ ಹುರಿದ ಸೇಂಗಾ ಪೊಟ್ಣ ತೆಗೆದು ಜಂಬಂಣನ ಟೇಬಲ್ ಮೇಲಿಟ್ಟು, 'ಜಂಬಂಣ, ಕುತ್ತಿಗ್ ಬಂದೈತಲ್ಲೋ' ಅಂತಂದು ಸೇಂಗಾಕಾಯೀನ್ನ ಟೇಬಲ್ಲಿಗೆ ಕುಟ್ಟಿ ಬಿಡಿಸಿ ಬಾಯಿಗೆ ಹಾಕ್ಕಂಡ. ಜಂಬಂಣನೂ ಒಂದು ಕಾಯಿ ಕುಟ್ಟಿದ.

'ಯೇನಾತಪಾ?'

'ಆ ನಾಕನೇ ಕ್ರಾಸ್ ವಟಾರದ ವಂದು ಮನೆಯೋರು ಬಾಡಿಗೆ ಕೊಟ್ಟಿಲ್ಲ. ಕೇಳ್ದಾಗೆಲ್ಲ ಯಿವತ್ತೂ ನಾಳೆ, ಯಿವತ್ತೂ ನಾಳೆ. ಸಾಕಾಗಿ ಹೋಗಿದೆ ನಂಗೆ. ಬಾಡಿಗೆ